

(6ನೇ ಪುಟದಿಂದ)

## ದಬ್ಬೆ ಹಿನ್ನೀರಿನ ಪುಟ್ಟ ಜಲಪಾತ:

ಸಾಗರ ತಾಲ್ಲೂಕಿನ ಕಾರ್ಗಲ್‌ನಿಂದ ಭಟ್ಕಳ ಮಾರ್ಗವಾಗಿ ಸಾಗುವಾಗ ಕಾರ್ಗಲ್‌ನಿಂದ 35ಕಿ.ಮೀ ಕ್ರಮಿಸಿದರೆ ಸಿಗುವ ಪುಟ್ಟ ಊರು ಕೊಂಜಳ್ಳಿ. ಇಲ್ಲಿಂದ ಬಲಭಾಗದಲ್ಲಿ ದಬ್ಬೆ ಜಲಪಾತಕ್ಕೆ ದಾರಿ ಎಂಬ ಫಲಕವಿರುವ ದಾರಿಗೆ ತಿರುಗಿ (ಸ್ವಲ್ಪ ದೂರ ಡಾಂಬರು ರಸ್ತೆ ಇದೆ) ಹಳ್ಳಿಯ ಮಣ್ಣು ರಸ್ತೆಯಲ್ಲಿ 8. ಕಿ.ಮೀ. ಸಾಗಿದರೆ ದಬ್ಬೆ ಜಲಪಾತಕ್ಕಿಂತ ಒಂದು ಕಿ.ಮೀ. ಮೊದಲು ದಬ್ಬೆ ಜಲಪಾತದಲ್ಲಿ ಬೀಳುವ ನೀರಿನ ಹಳ್ಳ ರಸ್ತೆಗೆ ಅಡ್ಡಲಾಗಿದೆ. (ದಾರಿಯು ಅನೇಕ ಕವಲುಗಳನ್ನು ಹೊಂದಿರುವುದರಿಂದ ಬಿಳಿಗಾರಿನಲ್ಲಿಯೇ ಸೂಕ್ತ ಮಾರ್ಗದರ್ಶನ ಪಡೆದು ಕ್ರಮಿಸುವುದು ಉತ್ತಮ.)

ಈ ಹಳ್ಳಕ್ಕೆ ಸೇತುವೆ ನಿರ್ಮಾಣ ಮಾಡಿದ್ದು ಅದರ ಸಮೀಪ ಒಂದೆರೆಡು ಸಿಮೆಂಟ್ ಬೆಂಚ್‌ಗಳನ್ನು ಹಾಕಿದ್ದಾರೆ. ಈ ಜಾಗದಲ್ಲಿ ವಾಹನ ನಿಲ್ಲಿಸಿ ಬಲಭಾಗದಲ್ಲಿ ನೀರು ಹರಿಯುವ ದಿಕ್ಕಿಗೆ ಹತ್ತು ಗಜ ನೀರಿನಲ್ಲಿ ಹೋಗಿ ಪಕ್ಕದಲ್ಲಿ ಇಳಿಯಲು ಅನುಕೂಲವಿರುವ ಜಾಗದಲ್ಲಿ ಇಳಿದು ಜಲಪಾತವನ್ನು ನೋಡಬಹುದು. ಇಲ್ಲಿಯೂ ಜಲಪಾತದ ಮೇಲಿನಿಂದ ಇಳಿದು ಅದರ ತಳವನ್ನು ತಲುಪಬಹುದು.

ಜಲಪಾತದ ತಳದಲ್ಲಿ ಸ್ವಲ್ಪ ಎಚ್ಚರಿಕೆಯಿಂದ ಸಾಗಿ ನೀರಿನಲ್ಲಿ ನಲಿಯ-ಬಹುದು. ಎರಡು ಹಳ್ಳಗಳು ಸೇರುವ ಸಂಗಮ ಸ್ಥಳವೂ ಇದಾಗಿದ್ದು ಒಂದು ಹಳ್ಳ ಜಲಪಾತವನ್ನುಂಟು ಮಾಡಿದರೆ, ಮತ್ತೊಂದು ಕಲ್ಲು ಬಂಡೆಯ ಮೇಲಿಂದ ಹಾಲ್ನೊರೆಯನ್ನುಂಟು ಮಾಡುತ್ತಾ ಇಳಿದು ಬರುತ್ತದೆ. ಜಲಪಾತ 10–15 ಅಡಿ ಎತ್ತರದಿಂದ ಬೀಳುವುದರ ಜೊತೆಗೆ ಗೋಡೆಯಿಂದ ಮುಂದೆ ಧುಮುಕುವುದರಿಂದ ಜಲಪಾತದ ಹಿಂದೆಯೂ ಹೋಗಿ ಖುಷಿ ಅನುಭವಿಸುವ ಅವಕಾಶ ಇಲ್ಲಿದೆ.



ಈ ಜಲಪಾತ ಸರ್ವ ಋತು ಜಲಪಾತವಾಗಿದ್ದು, ಮಳೆಗಾಲದಲ್ಲಿ ಇಂಬಳಗಳು ಹೆಚ್ಚು. ಹಳ್ಳದೊಳಗೆ ಇಳಿದು ಜಲಪಾತ ವೀಕ್ಷಿಸಬೇಕಾಗಿರು-ವುದರಿಂದ ಮಕ್ಕಳನ್ನು ಕರೆದುಕೊಂಡು ಹೋಗಲು ಬೇಸಿಗೆ ಕಾಲವೇ ಹೆಚ್ಚು ಸೂಕ್ತ. ಇನ್ನೊಂದು ನೆನಪಿಡಬೇಕಾದ ಅಂಶವೆಂದರೆ, ಈ ಪ್ರದೇಶ ಶರಾವತಿ ಅಭಯಾರಣ್ಯದ ವ್ಯಾಪ್ತಿಗೆ ಸೇರಿದೆ. ಅರಣ್ಯ ಇಲಾಖೆಯವರು ಈ ಪ್ರದೇಶಕ್ಕೆ ಪ್ರವೇಶಿಸಲು ಅನುಮತಿ ಪತ್ರ ಕೇಳಬಹುದು. ಇನ್ನೂ ಆಸಕ್ತಿ, ತಾಕತ್ತು ಇದ್ದಲ್ಲಿ ಒಂದು ಕಿ.ಮೀ. ಮುಂದೆ ಸಾಗಿ ದಬ್ಬೆ ಜಲಪಾತವನ್ನೂ ವೀಕ್ಷಿಸಿ ಬರಬಹುದು. ●